ಉತ್ತರ ಬಂದಿಲ್ಲ ಎಂದು ಹೇಳಿಕೊಳ್ಳುತ್ತೇವೆ. ತಾವು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುವುದಕ್ಕಾಗುತ್ತದೆ. ಮತ್ತು ಚುಕ್ಕೆ ಗುರುತಿನ ಮತ್ತು ಚುಕ್ಕೆ ರಹಿತ ಯಾವ ಯಾವ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲವೆಂದು ಗೊತ್ತಾಗುತ್ತದೆ. ಏಕೆಂದರೆ ಸರ್ಕಾರದಿಂದ ಸರಿಯಾಗಿ ಉತ್ತರ ಬರುತ್ತಿಲ್ಲ.

ಅಧ್ಯಕ್ಷರು : ಅದನ್ನೆಲ್ಲ ನಮ್ಮ ಕಛೇರಿಯಲ್ಲಿ ತಯಾರು ಮಾಡುತ್ತೇವೆ. ತಯಾರು ಮಾಡಿ ಸಾಧ್ಯವಾದರೆ ಸೋಮವಾರದ ದಿವಸವೇ ಅದನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

(ಅ) ರಾಜ್ಯದ ಎಲ್ಲಾ ಕಡೆಯಲ್ಲಿ ಕಾನೂನು ಸುವ್ಯವಸ್ಥೆ ಕೆಟ್ಟಿರುವ ವಿಚಾರ.

+ ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ರಾಜ್ಯದ ಎಲ್ಲಾ ಕಡೆಯಲ್ಲಿ ಕಾನೂನು ಸುವ್ಯವಸ್ಥೆ ಕೆಡುತ್ತಿರುವ ವಿಚಾರವನ್ನು ನಾವು ಈ ಸದನದಲ್ಲಿ ಆಗಾಗ ಪ್ರಸ್ತಾಪ ಮಾಡುತ್ತಾ ಬಂದಿದ್ದೇವೆ ಹಾಗೂ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಸಹ ಬರುತ್ತಿರುವುದನ್ನು ನಾವು ನೋಡಿದ್ದೇವೆ. ಅದರಲ್ಲೂ ಹುಬ್ಬಳ್ಳಿ ಧಾರವಾಡಗಳಲ್ಲಿ ಕಳೆದ 2-3 ತಿಂಗಳುಗಳಿಂದ ಕೊಲೆ, ದರೋಡೆ, ಕಳ್ಳತನ ಮುಂತಾದವು ಸಾಕಷ್ಟು ನಡೆಯುತ್ತಿದೆ. ಅಲ್ಲಿ ಕಳೆದ ತಿಂಗಳು ಡಾ: ಜೋಷಿ ಮತ್ತು ಅವರ ತಮ್ಮನ ಕೊಲೆ ಆಯಿತು. ಆ ಕೊಲೆ ಆದಮೇಲೆ ಕೊಲೆ ಮಾಡಿದವರು ಯಾರು ಎನ್ನುವ ಸುಳಿವು ಪಡೆದು ಯಾರನ್ನೂ ಸಹ ಬಂಧನ ಮಾಡಲು ಪೊಲೀಸರಿಂದ ಸಾಧ್ಯವಾಗಲಿಲ್ಲ. ಹಾಗೆಯೇ ವೈದ್ಯಕೀಯವಾಗಿ ಕೆಲಸ ಮಾಡಿರಕ್ಕಂಥವರು ಮತ್ತು ಒಬ್ಬ ಹಿರಿಯ ಅಧಿಕಾರಿಗಳಾದಂಥ ಡಾ: ಹಿರೇಮಠ್ ಎನ್ನುವವರನ್ನು ವಿದ್ಯಾನಗರದ ಅವರ ಮನೆಯಲ್ಲಿಯೇ ಬೆಳಗ್ಗಿನ ಜಾವ ಕೊಲೆ ಮಾಡಿದ್ದಾರೆಂದು ಇವತ್ತು ಬೆಳಿಗ್ಗೆ 10-00 ಗಂಟೆಗೆ ನನಗೆ ಹುಬ್ಬಳ್ಳಿಯಿಂದ ಫೋನ್ ಬಂತು. ಕಳೆದ ತಿಂಗಳು ಜೋಡಿ ಕೊಲೆ ಆಗಿದ್ದರೆ ಇವತ್ತು ಈ ಕೊಲೆ ಆಗಿದೆ. ಹೀಗಾಗಿ ಹುಬ್ಬಳ್ಳಿ- ಧಾರವಾಡದಲ್ಲಿ ಕಾನೂನು ಸುವ್ಯವಸ್ಥೆ ಬಹಳಷ್ಟು ಹದಗೆಟ್ಟಿದೆ. ಆದರಲ್ಲೂ ನಮ್ಮ ಹುಬ್ಬಳ್ಳಿಯಲ್ಲಿ ಪೊಲೀಸರು ಸಂಪೂರ್ಣವಾಗಿ ನಿಷ್ಕ್ರಿಯರಾಗಿದ್ದಾರೆ. ಏಕೆಂದರೆ 10-15 ವರ್ಷಗಳಿಂದ ಕೆಲವು ಅಧಿಕಾರಿಗಳು ಮತ್ತು ಪೊಲೀಸ್ ಇನ್ಸ್‌ಪೆಕ್ಟರುಗಳು ಒಂದೇ ಕಡೆ ಇದ್ದಾರೆ. ಹುಬ್ಬಳ್ಳಿ-ಧಾರವಾಡಗಳಲ್ಲಿ ಇರತಕ್ಕಂಥ ಪೊಲೀಸರು, ಇನ್ಸ್‌ಪೆಕ್ಟರುಗಳನ್ನು ಬೇರೆ ಕಡೆಗೆ ವರ್ಗ ಮಾಡಿರಿ ಎಂದು ನಾನು ಸಾಕಷ್ಟು ಸಲ ಹೇಳಿದ್ದೇನೆ. ಆದರೆ ಸರ್ಕಾರ ಇದನ್ನು ಸೀರಿಯಸ್ ಆಗಿ ಇಲ್ಲಿಯವರೆಗೆ ತೆಗೆದುಕೊಂಡಿಲ್ಲ. ಪೊಲೀಸರು ಕೇವಲ ದುಡ್ಡು ಮಾಡುವುದಕ್ಕೆ ನಿಂತಿದ್ದಾರೆಯೇ ಹೊರತು ಕೆಲಸ ಮಾಡುವುದಕ್ಕೆ ಅವರಿಗೆ ಆಸಕ್ತಿ ಇಲ್ಲ. 10-15 ವರ್ಷಗಳಿಂದ ಒಂದೇ ಕಡೆ ಇರತಕ್ಕಂಥ ಪೊಲೀಸ್ ಇನ್ಸ್‌ಪೆಕ್ಟರುಗಳನ್ನು ತೆಗೆದು ಬೇರೆ ಕಡೆಗೆ ವರ್ಗ ಮಾಡಿ, ಇಲ್ಲದಿದ್ದರೆ ಹುಬ್ಬಳ್ಳಿ-ಧಾರವಾಡದ ಕಾನೂನು ವ್ಯವಸ್ಥೆ ಪೂರ್ತಿಯಾಗಿ ಹದಗೆಟ್ಟು ಹೋಗುತ್ತದೆ. ಹುಬ್ಬಳ್ಳಿಯಲ್ಲಿ ಒಂದು ರೀತಿಯ ಆತಂಕದ ವಾತಾವರಣ ಏರ್ಪಟ್ಟಿದೆ. ಈ ಕೊಲೆ ಬಗ್ಗೆ ತೀವ್ರಗತಿಯಿಂದ ಗಮನಹರಿಸಿ ತನಿಖೆ ಮಾಡಿ ಅಪರಾಧಿಯನ್ನು ಕಂಡುಹಿಡಿಯುವಂಥ ಕೆಲಸ ಆಗಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗತಾನೆ ಮಾನ್ಯ ವಿರೋಧಪಕ್ಷದ ನಾಯಕರು ಕೊಟ್ಟಿರುವ ನೋಟೀಸನ್ನು ನೋಡಿದೆ. ಸಂಬಂಧಪಟ್ಟ ಇಲಾಖೆಯಿಂದ ಮಾಹಿತಿಯನ್ನು ತರಿಸುವುದಕ್ಕೆ ಕಳುಹಿಸಿಕೊಟ್ಟಿದ್ದೇನೆ.

ಸಾಧ್ಯವಾದರೆ ಇವತ್ತು ಸಾಯಂಕಾಲದೊಳಗೆ ಅಥವಾ ಮುಂದಿನ ದಿವಸ ಬೇಕಾದಂಥ ಮಾಹಿತಿಯನ್ನು ಒದಗಿಸುತ್ತೇನೆ.

ಅಧ್ಯಕ್ಷರು : ಶ್ರೀ ಆರಗ ಜ್ಞಾನೇಂದ್ರ ಅವರೇ, ಸಂಬಂಧಪಟ್ಟ ಮಂತ್ರಿಯವರು ವಿಧಾನ ಪರಿಷತ್ತಿನಲ್ಲಿ ಇದ್ದಾರೆ. ಆದ್ದರಿಂದ ತಮಗೆ ಉತ್ತರವನ್ನು ಸೋಮವಾರ ನಾನು ಕೊಡಿಸುತ್ತೇನೆ.

(ಇ) ಬೆಲೆ ಬಾಳುವಂಥ ಮಿಶ್ರತಳಿ ಹಸುಗಳು ಸಾಯುತ್ತಿರುವ ವಿಚಾರ

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ತಾವು ಯಾವಾಗಲಾದರೂ ಉತ್ತರವನ್ನು ಕೊಡಿಸಿ. ಆದರೆ ನನ್ನ ತಾಲ್ಲೂಕಿನಲ್ಲಿ ಜಾನುವಾರುಗಳು ಖಾಲಿ ಆಗುತ್ತಿವೆ. ಅಲ್ಲಿರುವ ಆಸ್ಪತ್ರೆಗಳಿಗೆಲ್ಲ ಬೀಗ ಹಾಕಿಸುವುದು ಒಳ್ಳೆಯದು. ಅಲ್ಲಿ ವಿಚಿತ್ರವಾದಂಥ ರೋಗ ಬಂದಿದೆ. ನಾವು ತಮಗೆ ಸೂಚನೆ ಕಳುಹಿಸಿಕೊಟ್ಟ ತಕ್ಷಣ ಸರ್ಕಾರ ಏನಾದರೂ ಕೆಲಸ ಮಾಡಿದ್ದರೆ ಅಡ್ಡಿ ಇಲ್ಲ. ನಾನು ತಮಗೆ ಸೂಚನೆ ಪತ್ರ ಕಳುಹಿಸಿ 4 ದಿವಸಗಳು ಆಯಿತು. ಇವತ್ತಿನವರೆಗೆ ನನ್ನ ಕ್ಷೇತ್ರಕ್ಕೆ ಸೈಂಟಿಸ್ಟ್ ಹೋಗಲಿಲ್ಲ. ಇದು ವಿಚಿತ್ರವಾದಂಥ ರೋಗ. ಶೂನ್ಯ ವೇಳೆ ಇರುವುದು ಇಲ್ಲಿ ಇಂಥ ಸಾರ್ವಜನಿಕ ಮಹತ್ವದ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕಲ್ಲವೇ?

ಅಧ್ಯಕ್ಷರು : ಪ್ರಶ್ನೆ ಆದಲ್ಲ. ಸಂಬಂಧಪಟ್ಟ ಸಚಿವರು ಯಾವುದೋ ಒಂದು ವಿಷಯಕ್ಕೆ ಜರೂರಾಗಿ ಉತ್ತರವನ್ನು ಕೊಡಬೇಕೆಂದು ವಿಧಾನ ಪರಿಷತ್ತಿನಲ್ಲಿ ಇರುವಾಗ ನಾನೇನು ಮಾಡಲಿ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಹಾಗಲ್ಲ. ಮಾನ್ಯ ಸದಸ್ಯರು ನೋಟೀಸ್ ಕೊಟ್ಟು 4 ದಿವಸಗಳಾಯಿತು. ಸಂಬಂಧಪಟ್ಟ ಸಚಿವರು ವಿಧಾನಪರಿಷತ್ತಿನಲ್ಲಿ ಉತ್ತರ ಕೊಡುವುದನ್ನು ಮುಗಿಸಿಕೊಂಡು ಬಂದು ಇಲ್ಲಿ ಉತ್ತರ ಕೊಡಲಿ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಪಕ್ಕದ ಶಿವಮೊಗ್ಗದಲ್ಲಿ ಇದ್ದು ನನಗೆ ಸಹ ಇದು ಗೊತ್ತಾಗಲಿಲ್ಲ. ನಾನು ಇವತ್ತೇ ಸಂಬಂಧಪಟ್ಟ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅದಕ್ಕೆ ಏನು ಪರಿಹಾರ ಕಂಡು ಹಿಡಿಯಬೇಕೋ ಅದೆಲ್ಲ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಇದೊಂದು ವಿಚಿತ್ರವಾದ ರೋಗ. ಸುಮಾರು 10 ರಿಂದ 15 ಸಾವಿರ ರೂಪಾಯಿಗಳಷ್ಟು ಬೆಲೆ ಬಾಳುವಂಥ ಮಿಶ್ರತಳಿ ಹಸುಗಳು ಇವತ್ತಿನ ದಿವಸ ಸಾಯುತ್ತಿವೆ. ನಾಲ್ಕೈದು ದಿವಸಗಳ ಹಿಂದೆಯೇ ಈ ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಇವತ್ತೇ ಅಲ್ಲಿಗೆ ತಜ್ಞರು ಹೋಗತಕ್ಕಂಥ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.